CW : 6
PW :10

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No.2074/2019

| | | |
|---|---|---|
| ಸಾಕ್ಷಿದಾರರ ಹೆಸರು | : | ಅನಂತ ಶಂಕರ |
| ತಂದೆಯ ಹೆಸರು | : | ಡಿ. ಬೋರಯ್ಯ |
| ಪ್ರಾಯ | : | 58 |
| ಉದ್ಯೋಗ | : | ತಹಶೀಲ್ದಾರ್ , ಕಾಪು ತಾ. |
| ವಾಸಸ್ಥಳ | : | ಕಾಪು |
| ದಿನಾಂಕಃ02-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನಾನು ದಿನಾಂಕಃ 19-9-2016 ರಿಂದ 11-01-2019 ರವರೆಗೆ ಪುತ್ತೂರು ತಹಶೀಲ್ದಾರ್ ಆಗಿ ಕರ್ತವ್ಯ . ನಿರ್ವಹಿಸಿರುತ್ತೇನೆ.

ದಿ.17-08-2018 ರಂದು ಚಾಸಾ-1 ರವರು ಗಾಂಜಾ ಮಾರಾಟದ ಬಗ್ಗೆ ನನಗೆ ಮಾಹಿತಿಯನ್ನು ತಿಳಿಸಿದ್ದು ಸಹಕರಿಸುವಂತೆ ಕೋರಿದ ಮೇರೆಗೆ ನಾನು ಅವರೊಂದಿಗೆ ಸ್ದಳಕ್ಕೆ ದರ್ಬೆ ಸರ್ಕಲ್ಗೆ 5.15 ಕ್ಕೆ ಹೋಗಿದ್ದು ಚಾಸಾ-1 ಮತ್ತು ಸಿಬ್ಬಂದಿಗಳು ಹಾಗೂ ಅರೋಪಿ ಪ್ರಸಾದ್ ಕೆಎ-21-ಬಿ-8490 ಆಟೋದಲ್ಲಿ ಇದ್ದು ಆಟೋದ ಒಳಗೆ ಗಾಂಜಾ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಇದ್ದು ಅಂಗಶೋಧನೆ ಮಾಡಬಹುದೇ ಎಂದು ಆರೋಪಿಗೆ ನೋಟೀಸ್ ನೀಡಿರುತ್ತೇನೆ. ಆತ ಶೋಧನೆ ಮಾಡಲು

CW : 6
PW :10

ಒಪ್ಪಿದ್ದು ಸ್ಥಳಕ್ಕೆ ಪಂಚರಾಗಿ ಚಾಸಾ-4 ಮತ್ತು 5 ರವರನ್ನು ಕರೆಯಿಸಿ ಅವರಿಗೆ ವಿಚಾರವನ್ನು ತಿಳಿಸಿ ಅವರು ಒಪ್ಪಿಕೊಂಡ ಮೇರೆಗೆ ಸಾಕ್ಷಿದಾರರ ಸಮಕ್ಷಮದಲ್ಲಿ ಅಂಗಶೋಧನೆ ಹಾಗೂ ವಾಹನ ತಪಾಸಣೆಯನ್ನು ಮಾಡಿದಾಗ ಆಟೋರಿಕ್ಷಾದ ಡ್ರೈವರ್ ಸೀಟಿನ ಕೆಳಗೆ ಗಾಂಜಾ ತರಹದ ವಸ್ತು ಸಿಕ್ಕಿರುತ್ತದೆ. ಅದನ್ನು ತೂಕ ಮಾಡಿ ನೋಡಿದಾಗ 40 ಗ್ರಾಂ ಇದ್ದು ಅದರ ಬೆಲೆ 2000 ಎಂದು ಅಂದಾಜಿಸಿರುತ್ತೇವೆ. ಮತ್ತು ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಸೀಲ್ ಮಾಡಿರುತ್ತೇವೆ. ಮಹಜರನ್ನು 6.00 ಗಂಟೆಯಿಂದ 7.00 ಗಂಟೆಯವರೆಗೆ ಮಹಜರು ಮುಖೇನ ಸೊತ್ತುಗಳನ್ನು ಸ್ವಾಧೀನಪಡಿಸಿಕೊಂಡಿರುತ್ತೇವೆ. ನಂತರ ಆರೋಪಿ, ಆಟೋ ಮತ್ತು ಗಾಂಜಾದೊಂದಿಗೆ ಠಾಣೆಗೆ ಬಂದಿರುತ್ತೇವೆ. ಮಹಜರನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು 3ಡಿ ಎಂದು ಗುರುತಿಸಲಾಯಿತು. ಆರೋಪಿಗೆ ನೀಡಿದ ನೋಟೀಸನ್ನು ನಿಪಿ-13, ಉತ್ತರವನ್ನು ನಿಪಿ-14, ಸಾಕ್ಷಿಯ ಸಹಿಯನ್ನು 13ಎ ಮತ್ತು 14ಎ, ಆರೋಪಿಯ ಸಹಿಯನ್ನು 13ಬಿ, 14ಬಿ ಎಂದು ಗುರುತಿಸಲಾಯಿತು. ಆರೋಪಿಯನ್ನು ವಿಸಿಯಲ್ಲಿ ನೋಡಿ ಗುರುತಿಸಿರುತ್ತೇನೆ. ಎಮ್ ಒ-1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟಿಸವಾಲು ಆರೋಪಿಗಳ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ**

ನನ್ನನ್ನು ಪತ್ರಾಂಕಿತ ಅಧಿಕಾರಿಯಾಗಿ ಸಹಕರಿಸಲು ಚಾಸಾ-1 ರವರು ಲಿಖಿತ ನೋಟೀಸನ್ನು ನೀಡಿರುವುದಿಲ್ಲ. ನಿಪಿ-13 ಮತ್ತು 14 ಪೊಲೀಸರ ಜೀಪಿನಲ್ಲಿ ಚಾಸಾ-1 ರವರು ತಯಾರಿಸಿರುತ್ತಾರೆ. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. 4 ಜನ ಪೊಲೀಸ್ ಸಿಬ್ಬಂದಿಗಳು ಇದ್ದರು. ಪಂಚರನ್ನು ನಾನೇ ಬರಮಾಡಿಕೊಂಡಿರುತ್ತೇನೆ. ಒಬ್ಬರು ಹಾರಾಡಿಯವರು, ಇನ್ನೊಬ್ಬರು ಬೆಟ್ಟಂಪಾಡಿಯವರು. ಅವರಿಗೆ ನೋಟೀಸ್ ನೀಡಿರುವುದಿಲ್ಲ. ಮಾಪನದ ಕಂಪನಿ ಮತ್ತು ಮಾಡೆಲ್ ಗೊತ್ತಿಲ್ಲ. ಎಮ್ ಒ -1 ರ ಮೇಲೆ ನನ್ನ ಸಹಿ ಇಲ್ಲ ಮತ್ತು ಎ ಎಂದು ಕಂಡುಬರುತ್ತಿಲ್ಲ. ದರ್ಬೆ ಸರ್ಕಲ್ ನಲ್ಲಿದ್ದ ದಾರಿದೀಪದ ಸಹಾಯದಿಂದ ಬರೆದಿರುತ್ತೇವೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಧಾಳಿಗೆ ಹೋಗಿಲ್ಲ, ಆರೋಪಿಯ ಅಂಗಶೋಧನೆ ಮಾಡಿಲ್ಲ, ಆರೋಪಿಯಿಂದ ಯಾವುದೇ ಗಾಂಜಾ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

CW : 6
PW :10

ಮು. ಮಾಲಿಗೂ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು